ಓ.ಎಸ್. ನಂಃ 628/2023
ಡಿ.ಡಬ್ಲ್ಯೂ-1 (ಚನ್ನಪ್ಪ)

ದಿನಾಂಕ: 08-07-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀಸವಾಲುಃ ಶ್ರೀ.ಎನ್.ಎಸ್.ಜಿ. ವಾದಿ ಪರ ವಕೀಲರಿಂದಃ**

18. ನಮ್ಮ ಅನುಕೂಲಕ್ಕಾಗಿ ತಲಾಟಿಯವರಿಗೆ ಅರ್ಜಿಕೊಟ್ಟು 01ಎಕರೆ ಜಮೀನನ್ನು ಪ್ರತ್ಯೇಕವಾಗಿ ಮಲ್ಲಪ್ಪ ಇವರ ಹೆಸರಿಗೆ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಮಲ್ಲಪ್ಪ ಇವರ ಹೆಸರಿಗೆ 01ಎಕರೆ ಜಮೀನು ಪ್ರತ್ಯೇಕವಾಗಿ ನೋಂದಾಯಿತ ವಿಭಾಗ ಪತ್ರದಡಿ ಆಗಲಿ ನ್ಯಾಯಾಲಯದ ಡಿಕ್ರೀ ಪ್ರಕಾರ ಆಗಲಿ ಆಗಿಲ್ಲ ಎಂದರೆ ಸರಿ. ಈ ಹೊತ್ತಿಗೂ ಸಹ ದಾವಾ ಆಸ್ತಿಯಲ್ಲಿ ನಾವು ಮತ್ತು ವಾದಿಯರು ಸಾಮೂಹಿಕ ಕಬ್ಜಾ ವಹಿವಾಟಿಯಲ್ಲಿ ಇದ್ದೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ವಾದಿಯರಿಗೆ ಪಾಲು ಕೊಡುವುದನ್ನು ತಪ್ಪಿಸಿಕೊಳ್ಳುವುದಕ್ಕಾಗಿ ವಾದಿ ಮತ್ತು ನಮ್ಮ ನಡುವೆ ವಾಟ್ನಿ ಆಗಿದೆ ಎಂದು ಹೇಳಿ ಸುಳ್ಳು ತಕರಾರನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಿರುವ ಎಲ್ಲ ವಿಷಯಗಳು ಸುಳ್ಳು ಇರುತ್ತವೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)
ಓ ಹೇ ಕೇ ಸರಿ ಇದೆ.

(ಉಮೇಶ ಎಸ್. ಅತನೂರೆ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಗೋಕಾಕ.

ಸಾಕ್ಷಿಯ ಸಹಿ